ಸಾಕ್ಷಿಯನ್ನು ದಿನಾಂಕ **25-01-2024** ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

## ಪಾಟೀ ಸವಾಲುಃ ಆರೋಪಿ ಪರ ಶ್ರೀ ಎನ್.ಕೆ. ವಕೀಲರಿಂದಃ

ನನ್ನ ವಿರುದ್ಧ ಇದೇ ನ್ಯಾಯಾಲಯದಲ್ಲಿ ಎರಡು ವರ್ಷಗಳ ಹಿಂದೆ ಚೆಕ್ ಅಮಾನ್ಯ ಪ್ರಕರಣಗಳು ಇದ್ದವು. ನಾನು ಪ್ರಸ್ತುತ ಹೋಟೆಲ್ ಉದ್ಯಮವನ್ನು ವೆಂಕಟ್ರಮಣ ಸೊಸೈಟಿ ಬಳಿ ನಡೆಸುತ್ತಿದ್ದೇನೆ. ನನಗೆ ಹೊಟೇಲ್ ಉದ್ಯಮವನ್ನು ಹೊರತುಪಡಿಸಿ ನನ್ನ ಹೆಸರಿನಲ್ಲಿ ಬೇರಾವ ಆಸ್ತಿಯೂ ಇದ್ದಿರುವುದಿಲ್ಲ. ಸಾಕ್ಷಿಯು ಮುಂದುವರೆದು ನನ್ನ ತಂದೆಯವರ ಹೆಸರಿನಲ್ಲಿ ಆಸ್ತಿಯು ಇರುತ್ತದೆ ಎಂದು ನುಡಿಯುತ್ತಾರೆ.

ನನಗೆ ಸುಳ್ಯದ ವೆಂಕಟ್ರಮಣ ಸೊಸೈಟಿಯಲ್ಲಿ ರೂ.90,000/- ದವರೆಗೆ ಸಾಲ ಇರುತ್ತದೆ. ಸದರಿ ಸಾಲವನ್ನು ತೆಗೆದು ಒಂದು ವರ್ಷವಾಗಿರುತ್ತದೆ. ಸದರಿ ಸಾಲವನ್ನು ನಾನು ಹೊಟೇಲ್ ಉದ್ಯಮದ ಉದ್ದೇಶಕ್ಕೋಸ್ಕರ ಪಡೆದುಕೊಂಡಿರುತ್ತೇನೆ. ಸದರಿ ಸಾಲವನ್ನು ಕಂತುಗಳ ಪ್ರಕಾರ ನಿಯಮಿತವಾಗಿ ನಾನು ಪಾವತಿ ಮಾಡುತ್ತಿದ್ದೇನೆ. ನಾನು ನಿಶ್ಚಿತ ಠೇವಣಿಯನ್ನು ಹೊಂದಿರುವುದಿಲ್ಲ.

ನನ್ನ ಹೆಸರಿನಲ್ಲಿ ಕರ್ನಾಟಕ ಬ್ಯಾಂಕ್, ಸುಳ್ಯ ಶಾಖೆಯಲ್ಲಿ ಉಳಿತಾಯ ಖಾತೆ ಇರುತ್ತದೆ. ಸದರಿ ಉಳಿತಾಯ ಖಾತೆಯಲ್ಲಿ ಹಿಂದೆ ರೂ.2,00,000/- ರಷ್ಟು ಜಮೆಯಾಗುತ್ತಿತ್ತು , ಈಗ ರೂ.25,000/- ನನ್ನ ಉಳಿತಾಯ ಖಾತೆಯಲ್ಲಿ ಇರುತ್ತದೆ.

ನನಗೆ ಇಬ್ಬರು ಮಕ್ಕಳಿದ್ದು, ಅವರಿಬ್ಬರು ವಿದ್ಯಾಭ್ಯಾಸವನ್ನು ಮಾಡುತ್ತಿದ್ದಾರೆ. ನನ್ನ ಹೊಟೇಲ್ ಉದ್ಯಮದಿಂದಲೇ ನನ್ನ ಮಕ್ಕಳ ವಿದ್ಯಾಭ್ಯಾಸದ ಖರ್ಚು , ನನ್ನ ಮನೆಯ

ಸಂಪೂರ್ಣ ಖರ್ಚು–ವೆಚ್ಚಗಳು ನಡೆಯುತ್ತವೆ ಎಂದರೆ ಸರಿ. ದಿನಂಪ್ರತಿ ನನ್ನ ಹೋಟೇಲ್ ಉದ್ಯಮದಿಂದ ರೂ.8,000/– ದಿಂದ ರೂ.10,000/– ದವರೆಗೂ ದುಡಿಯುತ್ತಿದ್ದೇನೆ. ನನಗೆ ವರ್ಷಕ್ಕೆ ರೂ.4,00,000/– ದವರೆಗೂ ಲಾಭ ಬರುತ್ತದೆ. ನಾನು ಆದಾಯ ತೆರಿಗೆಯನ್ನು ಪಾವತಿಸುತ್ತಿದ್ದೇನೆ. ನಾನು ಕಳೆದ ಮೂರು ವರ್ಷಗಳಿಂದ ಆದಾಯ ತೆರಿಗೆಯನ್ನು ಪಾವತಿಸುತ್ತಿದ್ದೇನೆ. ಸದರಿ ಆದಾಯ ತೆರಿಗೆಯು ನನ್ನ ಬಳಿ ಇದ್ದು, ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಹುದು.

ನಾನು ಹೇಳುವ ಪ್ರಕಾರ ನನಗೆ ಯಾವುದೇ ಅದಾಯಗಳು ಇರುವುದಿಲ್ಲ ಎಂದರೆ ಸರಿಯಲ್ಲ.

ಆರೋಪಿಯು ನನ್ನ ಸ್ನೇಹಿತನಾಗಿದ್ದು, ಆತ್ಮೀಯತೆಯಿಂದ ನನ್ನಲ್ಲಿ ರೂ.1,40,000/– ಹಣವನ್ನು ನನ್ನಲ್ಲಿ ಕೇಳಿರುತ್ತಾರೆ. ಆರೋಪಿಯ ಮನೆಯು ಕುರುಂಜಿಭಾಗ್ ಬಳಿ ಇರುತ್ತದೆ. ಆರೋಪಿಯ ಮನೆಗೆ ನಾನು ಹೋಗಿರುತ್ತೇನೆ. ಆರೋಪಿಯ ಕುಟುಂಬದ ಹಿನ್ನಲೆ ಬಗ್ಗೆ ನನಗೆ ತಿಳಿದಿರುವುದಿಲ್ಲ. ಆರೋಪಿಯು ಕಳೆದ 10 ವರ್ಷಗಳಿಂದ ನನ್ನ ಗೆಳೆಯನಾಗಿದ್ದು , ಪರಿಚಯಸ್ಥರಾಗಿರುತ್ತಾರೆ.

ಆರೋಪಿಯು ನನ್ನಿಂದ 2023 ರ ಜೂನ್ ತಿಂಗಳಲ್ಲಿ ರೂ.1,40,000–00 ಹಣವನ್ನು ಪಡೆದುಕೊಂಡಿರುತ್ತಾರೆ. ಆದರೆ ನಿಖರವಾಗಿ ಯಾವ ದಿನಾಂಕದಂದು ಆರೋಪಿಗೆ ಹಣ ನೀಡಿದ್ದೇನೆಂದು ನನಗೆ ಈಗ ನೆನಪಿರುವುದಿಲ್ಲ. ಆರೋಪಿಗೆ ನಾನು ಅವರು ಕೋರಿಕೊಂಡ ಮೇರೆಗೆ ಹಣವನ್ನು ನೀಡುವ ಸಮಯದಲ್ಲಿ, ಅವರು ನನಗೆ

ರೂ.1,40,000-00 ಮೊತ್ತ ಹಾಗೂ ದಿನಾಂಕವನ್ನು ನಮೂದಿಸಿದ ಒಂದು ಚೆಕ್ಕನ್ನು ನೀಡಿರುತ್ತಾರೆ. ಆರೋಪಿ ನನ್ನಿಂದ ಹಣ ಪಡೆಯುವ 10 ದಿನಗಳ ಪೂರ್ವದಲ್ಲಿ ಆರೋಪಿಯು ರೂ.1,40,000-00 ಹಣವನ್ನು ತನಗೆ ಕೊಡಬೇಕೆಂದು ನನ್ನಲ್ಲಿ ಕೇಳಿರುತ್ತಾರೆ. ನಾನು ರೂ. 1,40,000-00 ಹಣವನ್ನು ನನ್ನ ಕರ್ನಾಟಕ ಬ್ಯಾಂಕ್ ನಿಂದ ವಿತ್ ಡ್ರಾ ಮಾಡಿ ಆರೋಪಿಗೆ ನಗದು ರೂಪದಲ್ಲಿ ನೀಡಿರುತ್ತೇನೆ. ನಾನು ಕರ್ನಾಟಕ ಬ್ಯಾಂಕ್ ನಿಂದ ವಿತ್ ಡ್ರಾ ಮಾಡಿದ ದಿನಾಂಕ ಹಾಗೂ ಆರೋಪಿಗೆ ಸದರಿ ಹಣವನ್ನು ನೀಡಿದ ದಿನಾಂಕ ಒಂದೇ ಆಗಿರುತ್ತದೆ ಎಂದರೆ ಸಾಕ್ಷಿಯು ಆಗಿರಬಹುದು, ನನಗೆ ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ.

ಆರೋಪಿಗೆ ನಾನು ರೂ.1,40,000-00 ಹಣವನ್ನು ಕೆ.ವಿ.ಜಿ. ಕ್ಯಾಂಪಸ್ ಬಳಿಯಿರುವ ಮಾತಾ ಹೊಟೇಲ್‌ನಲ್ಲಿ ನೀಡಿರುತ್ತೇನೆ. ನಾನು ಆರೋಪಿಗೆ ಹಣ ನೀಡುವ ಸಮಯದಲ್ಲಿ ನಾನು ಹಾಗೂ ಆರೋಪಿಯನ್ನು ಹೊರತುಪಡಿಸಿ ಬೇರಾರೂ ಅಲ್ಲಿ ಇದ್ದಿರಲಿಲ್ಲ. ಸದರಿ ರೂ.1,40,000-00 ಹಣವು ಎಷ್ಟೆಷ್ಟು ಮುಖ ಬಲೆಯ ನೋಟುಗಳೆಂದು ನನಗೆ ಈಗ ನೆನಪಿರುವುದಿಲ್ಲ.

ನಿಪಿ-1 ರಲ್ಲಿರುವ ಬರವಣಿಗೆಯು ಆರೋಪಿಯದ್ದಾಗಿರುತ್ತದೆ. ನಿಪಿ-1 ರಲ್ಲಿರುವ ಬರವಣಿಗೆಯು ನನ್ನದಾಗಿರುವುದಿಲ್ಲ, ಅದರಲ್ಲಿರುವ ಬರವಣಿಗೆಯು ಯಾರದ್ದು ಎಂದು ನನಗೆ ತಿಳಿದಿರುವುದಿಲ್ಲ. ಆರೋಪಿಯು ನನಗೆ ನಿಪಿ-1 ನ್ನು ಕೊಡುವ ಮೊದಲೇ ಅವರು ಬರೆದು ತಂದಿದ್ದರು. ನಿಪಿ-1 ರಲ್ಲಿರುವ ಸಹಿಯನ್ನು

ಸಾಕ್ಷಿಯ ಸಹಿ ನ್ಯಾಯಾಧೀಶರ ಸಹಿ

ಹೊರತುಪಡಿಸಿ ಮಿಕ್ಕ ಉಳಿದ ಎಲ್ಲಾ ಬರವಣಿಗೆಗಳನ್ನು ಆರೋಪಿಯು ನನಗೆ ಚೆಕ್ಕನ್ನು ಕೊಡುವಾಗಲೇ ಬರೆದು ತಂದಿದ್ದರು.

ಆರೋಪಿಯು ನನ್ನಲ್ಲಿ ಹಣವನ್ನು ಕೇಳಿದ ಬಗ್ಗೆ , ನಾನು ಆರೋಪಿಗೆ ನೀಡಿದ ಹಣದ ಕುರಿತು ಹಾಗೂ ಆರೋಪಿಯು ನನಗೆ ಚೆಕ್ಕನ್ನು ನೀಡಿದ ಕುರಿತು ನನ್ನ ಪತ್ನಿಗೆ ತಿಳಿದಿರುತ್ತದೆ. ನನ್ನ ಪತ್ನಿಯ ಹೊರತುಪಡಿಸಿ ಬೇರಾರಿಗೂ ನನ್ನ ಹಾಗೂ ಆರೋಪಿಯ ಈ ಹಣದ ವ್ಯವಹಾರದ ಕುರಿತು ತಿಳಿದಿರುವುದಿಲ್ಲ.

ಆರೋಪಿಯು ಡೆಂಟಲ್ ಕಾಲೇಜ್ ನಲ್ಲಿ ಉದ್ಯೋಗವನ್ನು ಮಾಡುತ್ತಾರೆ. ಆದರೆ ನಿಖರವಾಗಿ ಯಾವ ಉದ್ಯೋಗವನ್ನು ಮಾಡುತ್ತಾರೆಂದು ನನಗೆ ತಿಳಿದಿರುವುದಿಲ್ಲ. ಆರೋಪಿಯು ನನ್ನಲ್ಲಿ ತನಗೆ ಅವಶ್ಯಕವಾಗಿ ಹಣವು ಕೇಳಿದ್ದರ ಮೇರೆಗೆ ನಾನು ಆರೋಪಿಗೆ ಹಣವನ್ನು ಸಾಲವಾಗಿ ನೀಡಿರುತ್ತೇನೆ.

**ವಕೀಲರು ಸಾಕ್ಷಿಯ ಮುಂದುವರೆದ ಪಾಟೀ ಸವಾಲು ಮಾಡಲು ಕಾಲಾವಕಾಶ ಕೋರಿದ್ದು ಅದರಂತೆ ಅನುಮತಿಸಲಾಯಿತು.**

ನನ್ನ ಉಕ್ತಲೇಖನದ ರೀತ್ಯಾತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ ಇದೆ ಎಂದು ಒಪ್ಪಿರುತ್ತಾರೆ.

ಸಾಕ್ಷಿಯ ಸಹಿ

ವ್ಯವಹಾರಿಕ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ, ಸುಳ್ಯ.ದ.ಕ.

ಸಾಕ್ಷಿಯ ಸಹಿ

ನ್ಯಾಯಾಧೀಶರ ಸಹಿ

ಸಾಕ್ಷಿಯ ಸಹಿ ನ್ಯಾಯಾಧೀಶರ ಸಹಿ